ಕರ್ನಾಟಕ ವಿಧಾನಸಭೆ

KARNATAKA LEGISLATIVE ASSEMBLY

Saturday, the 12th July, 1980/Ashada 21, 1902 S.E.

The House met in the Assembly Chamber, Vidhana Soudha, at Nine of the Clock.

[MR. SPEAKER (SRI P. VENKATARAMANA) in the Chair.]

Representations by Members

re : Enquiry into the working of Employment Affirmation Scheme in the Anekal Taluk.

† ಶ್ರೀ ಎಸ್. ಆರ್. ಬೊಮ್ಮಾಯಿ (ಹುಬ್ಬಳ್ಳಿ).—ಮಾನ್ಯ ಅಧ್ಯಕ್ಷರೇ, ತಮಗೆಲ್ಲಾ ಗೊತ್ತಿರುವಂತೆ ಆನೇಕಲ್‌ನಲ್ಲಿ ಈ ಎಂಪ್ಲಾಯ್‌ಮೆಂಟ್ ಅಫರ್‌ಮೇಷನ್ ಸ್ಕೀಂನಲ್ಲಿ ಅವ್ಯವಹಾರಗಳು ನಡೆದಿದೆ. ಇದರ ಬಗ್ಗೆ ಈಗಾಗಲೇ ಸಿ.ಓ.ಡಿ. ಆಫೀಸರ್ ತನಿಖೆ ನಡೆಸುತ್ತಿದ್ದಾರೆ. ಈ ವಿಚಾರದಲ್ಲಿ ತಾಲ್ಲೂಕು ಬೋರ್ಡಿನ ಉಪಾಧ್ಯಕ್ಷರು ಕಂಪ್ಲೈಂಟ್ ಕೊಟ್ಟಿದ್ದಾರೆ ಮತ್ತು ಸಿ.ಓ.ಡಿ. ಮುಂದೆ ಸಾಕ್ಷ್ಯ ನುಡಿದಿದ್ದಾರೆ. ಈ ಉಪಾಧ್ಯಕ್ಷರು ಒಬ್ಬ ಹರಿಜನರು : ಇವರು ಈ ರೀತಿ ಧೈರ್ಯವಾಗಿ ಸಾರ್ವಜನಿಕ ಹಣದ ಅಪವ್ಯಯ ಮತ್ತು ಅವ್ಯವಹಾರಗಳನ್ನು ಬಯಲಿಗೆ ಎಳೆಯುವುದಕ್ಕೆ ಮುಂದೆ ಬಂದಿದ್ದಾರೆ. ಸಾಮಾನ್ಯವಾಗಿ ಸಾರ್ವಜನಿಕ ಮುಖಂಡರಾದವರು ಮುಂದೆ ಬರುವುದಿಲ್ಲ. ಅವರು ನಿನ್ನೆಯ ದಿವಸ ತಾಲ್ಲೂಕು ಬೋರ್ಡ್ ಆಫೀಸಿನ ಮುಂದೆ ಬರುತ್ತಿದ್ದಾಗ ಅವರನ್ನು ಹೊಡೆದಿದ್ದಾರೆ : ಬಿ.ಡಿ.ಓ. ಆಫೀಸ್ ಮುಂದೆ ಹೊಡೆದಿದ್ದಾರೆ. ಆ ಉಪಾಧ್ಯಕ್ಷರು ಈ ಬಗ್ಗೆ ಕಂಪ್ಲೈಂಟ್ ಕೊಟ್ಟಿದ್ದಾರೆ ಮತ್ತು ಆ ಕಂಪ್ಲೈಂಟಿನಲ್ಲಿ ಅಲ್ಲಿಯ ಬ್ಲಾಕ್ ಡೆವಲಪ್‌ಮೆಂಟ್ ಆಫೀಸರರ ಕುಮ್ಮಕ್ಕಿನಿಂದ, ಅವರ ಒಂದು ಪ್ರೋತ್ಸಾಹದಿಂದ ಈ ಘಟನೆ ನಡೆದಿದೆ ಎಂದು ಅವರು ಸ್ಪಷ್ಟವಾಗಿ ಹೇಳಿದ್ದಾರೆ. ಅವರು ಕಂಪ್ಲೈಂಟ್ ಕೊಟ್ಟಿದ್ದರೂ ಸಹ ತಕ್ಷಣ ಪೋಲೀಸರು ಯಾವ ಕ್ರಮವನ್ನೂ ಕೈಗೊಳ್ಳಲಿಲ್ಲ. ಅನಂತರ ಅವರು ಡಿ.ವೈ.ಎಸ್‌ಪಿ. ಯವರಿಗೆ ಕಂಪ್ಲೈಂಟ್ ಕೊಟ್ಟು ಎಲ್ಲಾ ವಿಚಾರಗಳನ್ನೂ ಹೇಳಿದ್ದಾರೆ. ಡಿ.ವೈ.ಎಸ್.ಪಿ ಯವರು ಅಧಿಕಾರಿಗಳನ್ನು ಕೆಳಿಸಿಕೊಡುತ್ತೇವೆ, ಈ ಬಗ್ಗೆ ವಿಚಾರಣೆ ಮಾಡಿಸುತ್ತೇವೆ ಎಂದು ಒಂದು ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಒಂದು ವಿಷಯದಲ್ಲಿ ಮಾತ್ರ ನಾನು ಸ್ಪಷ್ಟವಾಗಿ ಸರ್ಕಾರದ ಗಮನವನ್ನು ಸೆಳೆಯಬಯಸುತ್ತೇನೆ. ಒಬ್ಬ ಸಾರ್ವಜನಿಕ ಮುಖಂಡ ಸಾರ್ವಜನಿಕರ ಹಣದ ಅವ್ಯವಹಾರದ ಬಗ್ಗೆ ಬಹಿರಂಗವಾಗಿ ಆಪಾದನೆಗಳನ್ನು ಮಾಡಿ ಅದನ್ನು ರುಜುವಾತು ಮಾಡುವುದಕ್ಕೆ ಮುಂದೆ ಬಂದಾಗ ಅವರು ಹರಿಜನರು ಎನ್ನುವ ಕಾರಣ ಕ್ಕಾಗಿ ಅವರನ್ನು ಅಧಿಕಾರಿಗಳು ಹೊಡೆಸುವುದಕ್ಕೆ ಮುಂದಾದರು ಎಂದರೆ ಇನ್ನು ಸಾರ್ವಜನಿಕರು ಯಾವ ರೀತಿ ಅಂತಹ ಕಡೆ ಕೆಲಸ ಮಾಡುವುದಕ್ಕೆ ಮುಂದಾಗಬೇಕು ? ಅಲ್ಲಿಯ ಬಿ.ಡಿ.ಓ. ಅಧಿಕಾರಿಯ ಬಗ್ಗೆ ನನಗೂ ಸಹ ಅಲ್ಪ ಸ್ವಲ್ಪ ಪರಿಚಯವಿದೆ. ಅವರು ನನ್ನ ಕಾನ್‌ಸ್ಟಿಟ್ಯೂಯೆನ್ಸಿಯಲ್ಲಿ ಇದ್ದರು. ಷಡ್ಯೂಲ್ ಕ್ಯಾಸ್ಟ್, ಷೆಡ್ಯೂಲ್ಡ್ ಟ್ರೈಬ್ಸ್ ಮತ್ತು ಬ್ಯಾಕ್‌ವರ್ಡ್ ಕ್ಲಾಸ್‌ನವರಿಗೆ ಸಂಬಂಧಪಟ್ಟ ಹಾಸ್ಟಲ್‌ಗಳಲ್ಲಿ ಸಕ್ಕರೆ ಪೂರೈಕೆಗಳನ್ನು ಮಾರಿಕೊಂಡು ಮಿಸ್ ಅಪ್ರೊಪ್ರಿಯೇಷನ್ ಮಾಡಿದರು ಎಂದು ಅವರ ಮೇಲೆ ಅಲಿಗೇಷನ್ ಬಂದಿತ್ತು. ಅಲಿಗೇಷನ್ಸ್ ಬಂದಾಗ I wrote to the Divisional Commissioner. ನಂತರ ಡಿವಿಜನಲ್ ಕಮೀಷನರು, ಡೆಪ್ಯುಟ ಕಮೀಷನರು, ಅಸಿಸ್ಟೆಂಟ್ ಕಮೀಷನರಿಂದ ಎನ್‌ಕ್ವೈರಿ ಮಾಡಿದರು. The Divisional Commissioner has recommended for immediate enquiry and suspension. ಆದರೂ ಆಗಲಿಲ್ಲ, ಹಿಂದಿನ ಸರ್ಕಾರದಲ್ಲಿ

ಆಗಲಿಲ್ಲ. Even the enquiry by Asst. Commissioner and recommendation of the Divisional Commissioner has no value in this Government. ಆಗಿನ ಮಂತ್ರಿಗಳೂ ಕೂಡ ಏನೂ ಮಾಡಲಿಕ್ಕೆ ಆಗಲಿಲ್ಲ : ಮುಖ್ಯ ಮಂತ್ರಿಗಳೂ ಕೂಡ ಈ ಬಿ.ಡಿ.ಓ. ನನ್ನು ಏನೂ ಮಾಡಲಿಕ್ಕೂ ಆಗಲಿಲ್ಲ. The Leader of the Opposition has received a complaint from the public requesting the concerned authorities to hold an enquiry and none the less Officer of the rank of Asst. Commissioner has held the enquiry and recommended for the suspension. Two years have passed, no action has been taken ; why ? ಸರ್ಕಾರ ಇಷ್ಟು ದುರ್ಬಲವಾಗಿದೆಯೆ. ಒಬ್ಬ ತಪ್ಪಿತಸ್ಥ ಅಧಿಕಾರಿಯನ್ನು ತಮ್ಮ ಅಧಿಕಾರಿಗಳು ವಿಚಾರ ಮಾಡಿ, ಅವನ ಮೇಲೆ ಕ್ರಮ ತೆಗೆದುಕೊಳ್ಳದೇ ಹೇಗೆ ಇರುತ್ತಾರೆ. ಅಧಿಕಾರಿಗಳು ಎಷ್ಟು ಖಡೀಮರಿದ್ದಾರೆ, ಇದರಿಂದ ಅವರು ಏನಾಗುತ್ತಾರೆ ಎನ್ನುವಂಥ ವಿಷಯವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಆ ಬಿ. ಡಿ. ಓ. ಮೇಲೆ ನನಗೆ ವೈಯುಕ್ತಿಕವಾಗಿ ಏನೂ ದ್ವೇಷವಿಲ್ಲ. ಆದರೆ ಅಂಥ ಒಂದು ಪ್ರಶ್ನೆ ಉದ್ಭವವಾಗುತ್ತದೆ. ಇಲ್ಲಿ ನಾವು ಮಾನ್ಯ ಸದಸ್ಯರು ಒಂದು ಜವಾಬ್ದಾರಿ ಸ್ಥಾನದಲ್ಲಿದ್ದು ಸರ್ಕಾರಕ್ಕೆ ಕಂಪ್ಲೇಂಟ್ ಕಳಿಸುತ್ತೇವೆ. ಆದರೆ ಅವರ ಬಗ್ಗೆ ವಿಚಾರಣೆ ಮಾಡಿ ತಪ್ಪಿತಸ್ಥರ ಮೇಲೆ ಆ್ಯಕ್ಷನ್ ತೆಗೆದುಕೊಳ್ಳುವುದಿಲ್ಲ. ಇಲ್ಲಿ ಈ ವಿಷಯ ಬಂದಾಗ ಸಿ.ಓ.ಡಿ. ಎನ್‌ಕ್ವೈರಿ ಆಗುತ್ತಿದೆ ಎಂದು ಹೇಳಿದರು, ಅದರ ಬಗ್ಗೆ ಚರ್ಚೆ ಆಯಿತು. ಮಾನ್ಯ ಮಂತ್ರಿಗಳಾದ ಶ್ರೀ ರಾಮಕೃಷ್ಣ ಅವರು ನಾವು ಯಾವ ರೀತಿಯಲ್ಲೂ ಆ ಅಧಿಕಾರಿಗೆ ರಕ್ಷಣೆ ಕೊಡುವುದಿಲ್ಲ, ತಪ್ಪಿದರೆ ಗಲ್ಲಿಗೆ ಹಾಕುತ್ತೇವೆ ಎಂದು ಹೇಳಿದರು. ನಾನು ಇವತ್ತು ಸರ್ಕಾರಕ್ಕೆ ಕೇಳಬಯಸುತ್ತಾ ಇದ್ದೇನೆ. ಮಾನ್ಯ ಮಂತ್ರಿಗಳ ಕ್ಷೇತ್ರದಲ್ಲಿ ಈ ಒಂದು ಘಟನೆ ನಡೆದಿದೆ. ಹಿಂದೆ ನನ್ನ ಕ್ಷೇತ್ರದಲ್ಲಿ ಘಟನೆ ನಡೆದಾಗ ನಾನೇ ಎನ್‌ಕ್ವೈರಿ ಮಾಡಿಸಿದರೂ ಆ ಅಧಿಕಾರಿ ವಿರುದ್ಧ ಕ್ರಮ ತೆಗೆದುಕೊಳ್ಳಲಿಕ್ಕೆ ಆಗಲಿಲ್ಲ. ಇಂಥ ಒಂದು ಅವ್ಯವಹಾರ ಮಾಡಿ ಅದರಲ್ಲೂ ಒಬ್ಬ ಸಾಮಾಜಿಕ ಕಾರ್ಯಕರ್ತನನ್ನು ಹೊಡೆಸತಕ್ಕಂಥದ್ದು ಮುಂದುವರಿದರೆ ಅವನ ಮೇಲೆ ಯಾವಾಗ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ಎಂದು ನಾನು ಸರ್ಕಾರಕ್ಕೆ ಕೇಳುತ್ತಾ ಇದ್ದೇನೆ. ಇದರ ಬಗ್ಗೆ ಇವತ್ತು ಕೂಡಲೇ ಅವನನ್ನು ಸಸ್ಪೆಂಡ್ ಮಾಡತಕ್ಕಂಥ ಆಜ್ಞೆ ಹೊರಡಬೇಕು. ಸರಿಯೋ ತಪ್ಪೋ ನಂತರ ಎನ್‌ಕ್ವೈರಿ ಮಾಡಿ. ಹಿಂದಿನ ಫೈಲ್ ಇದೆ ; ಅಲಿಗೇಷನ್ಸ್ ಇದೆ, ಇಂಥಾ ಅಧಿಕಾರಿಯನ್ನು ಕೂಡಲೇ ಸಸ್ಪೆಂಡ್ ಮಾಡಿ ; ವಿಚಾರಣೆ ಮಾಡಿ ಸತ್ಯಾಂಶವಿದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಿ. ಇಲ್ಲದೇ ಹೋದರೆ ಸುಳ್ಳು ಕಂಪ್ಲೇಂಟ್ ಕೊಟ್ಟವರ ಮೇಲೆ ಆ್ಯಕ್ಷನ್ ತೆಗೆದುಕೊಳ್ಳಿ. ಇದು ಕೂಡಲೇ ಆಗದೇ ಹೋದರೆ ಆ ತಾಲ್ಲೂಕಿನಲ್ಲಿ ಶಾಂತಿಭಂಗ ಆಗುತ್ತದೆ, ಮುಂದೆ ಪರಿಸ್ಥಿತಿ ಇನ್ನೂ ಉಲ್ಬಣವಾಗುತ್ತದೆ. ಆದ್ದರಿಂದ ಆ ಅಧಿಕಾರಿಯನ್ನು ಕೂಡಲೇ ಸಸ್ಪೆಂಡ್ ಮಾಡಬೇಕು ಎಂದು ಒತ್ತಾಯ ಮಾಡುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸೀಪುರ).—ಮಾನ್ಯ ಅಧ್ಯಕ್ಷರೇ ನಾನು ಸಭೆಯ ಕಾಲವನ್ನು ಅನಾವಶ್ಯಕವಾಗಿ ತೆಗೆದುಕೊಳ್ಳುವುದಿಲ್ಲ. ನನಗೆ ಬೆಳಿಗ್ಗೆ ೮ ಗಂಟೆಗೆ ಈ ಒಂದು ದೂರು ಬಂದಿದೆ, ಅವರೆಲ್ಲರೂ ಬಂದು ದೂರು ಕೊಟ್ಟರು. ಯಾರು ತಾಲ್ಲೂಕು ಬೋರ್ಡ್ ಉಪಾಧ್ಯಕ್ಷರಿದ್ದಾರೆ ಅವರು ನನ್ನ ಪಕ್ಷಕ್ಕೆ ಸೇರಿದವರು. ನಾನು ಸುಮ್ಮನೆ ಕೂತುಕೊಂಡು ಮೂಕಪ್ರೇಕ್ಷಕನಾಗಿ ನೋಡಲಿಕ್ಕೆ ಸಾಧ್ಯವಿಲ್ಲ. ಇವತ್ತು ನಾವು ಕೂತಿರತಕ್ಕ ಸ್ಥಾನ ವಿರೋಧ ಪಕ್ಷದಲ್ಲಿ. ಸರ್ಕಾರದಲ್ಲಿ ನಡೆಯತಕ್ಕ ಅವ್ಯವಹಾರಗಳನ್ನು ಹೊರಗಡೆ ತರುವುದರಲ್ಲಿ ಶಕ್ತಿಮೀರಿ ಕೆಲಸ ಮಾಡಬೇಕಾಗುತ್ತದೆ. ಇವತ್ತು ಹಣ ದುರುಪಯೋಗವಾಗಿರುವುದನ್ನು ಒಬ್ಬ ಕಾರ್ಯಕರ್ತ, ಮುಖಂಡ ಸರ್ಕಾರದ ಗಮನಕ್ಕೆ ತರಲಿಕ್ಕೆ ಪ್ರಯತ್ನ ಮಾಡಿದಾಗ ಅವನ ಪ್ರಾಣಕ್ಕೆ ಸಂಚಾರ ತರತಕ್ಕ ಕೆಲಸ ಮಾಡುವುದಾದರೆ ನಾವು ಈ ಸ್ಥಾನದಲ್ಲಿ ಕೂಡಲಿಕ್ಕೆ ಸಾಧ್ಯವಿಲ್ಲ ಎಂದು ನಾನು ಜವಾಬ್ದಾರಿಯಿಂದ ಹೇಳುತ್ತಿದ್ದೇನೆ. ಮಾನ್ಯ ಅರ್ಥ ಸಚಿವರು ಈ ಸಭೆಯಲ್ಲಿ ಹೇಳಿದರು, ಅವರು ಪ್ರಿವಿಲೇಜ್ ಮೋಷನ್‌ನಲ್ಲಿ ಏನಾದರೂ ಡಿಫೆಂಡ್ ಮಾಡಿಕೊಳ್ಳಲಿ, ಆ ವಿಷಯವನ್ನು ನಾನು ಪ್ರಸ್ತಾಪ ಮಾಡಿಲಿಕ್ಕೆ ಹೋಗುವುದಿಲ್ಲ. ಇನ್ನು ೩ ದಿವಸಗಳಲ್ಲಿ ಈ ಪ್ರಕರಣಕ್ಕೆ ಸಂಬಂಧಪಟ್ಟ ಎಲ್ಲಾ ವಿಷಯಗಳನ್ನು ಹೇಳುತ್ತೇನೆ ಎಂದು ಹೇಳಿದ್ದಾರೆ. ೨೩ನೇ ತಾರೀಖಿನಿಂದ ೨೬ನೇ ತಾರೀಖಿನವರೆಗೆ ೫ ದಿನ ಆಯಿತು, ಸಿ.ಓ.ಡಿ. ವಿಚಾರಣೆ ನಡೆಸಿದ್ದಾರೆ. ಇವತ್ತು ೧೨ನೇ ತಾರೀಖು, ೨೬ನೇ ತಾರೀಖಿನಿಂದ ಇವತ್ತು ೧೨ನೇ ತಾರೀಖಿನವರೆಗೆ ೧೪ ದಿನವಾಗುತ್ತಾ ಬಂತು. ಈ ವಿಚಾರಣಾ

ವರದಿಯನ್ನು ಚೀಫ್ ಸೆಕ್ರೆಟರಿಯವರಿಗೆ ಕಳಿಸಿಕೊಟ್ಟಿದ್ದಾರೆ. ಇವತ್ತಿನ ಸಭೆಯ ಕಾರ್ಯಕಲಾಪ ಮುಂಗಿಯುವುದರೊಳಗೆ ವಿಚಾರಣಾ ವರದಿ ಏನು ಬಂದಿದೆ ಅದನ್ನು ಸಭೆಯ ಮುಂದೆ ಇಡಬೇಕು. ಆ ಒಂದು ಆಪಾದನೆಗಳಿಂದ ದೃಢೀಕರಿಸಲ್ಪಟ್ಟಿರುವವರನ್ನು ಯಾರೂ ಮುಚ್ಚಿಡಲಿಕ್ಕೆ ಸಾಧ್ಯವಿಲ್ಲ. ಯಾವ ರೀತಿಯ ಪ್ರಭಾವ ಬೀರಿದರೂ ಸಾಧ್ಯವಿಲ್ಲ. It is a foregone conclusion and no body can save that man. ದಯಮಾಡಿ ಆ ವರದಿಯನ್ನು ಸಭೆಯ ಮುಂದೆ ಇಡಬೇಕು. ನಾನು ಇವತ್ತು ನಿಮ್ಮ ಬಿಲ್ ಬಗ್ಗೆ ಹೆಚ್ಚು ಕಾಲ ಬೇಕು ಎಂದು ತಡೆಹಿಡಿಯುವುದಕ್ಕೆ ಹೋಗುವುದಿಲ್ಲ. ಈ ವರದಿಯನ್ನು ಈ ದಿವಸ ಕಾರ್ಯಕಲಾಪ ಮುಗಿಯುವುದರೊಳಗೆ ತರಿಸಬೇಕು. The Chief Secretary has already received an interim report as far as the C. O. D. enquiry is concerned. ಅದನ್ನು ಈ ಸಭೆಯ ಮುಂದೆ ಇಡಬೇಕು. ಬಿ.ಡಿ.ಓ. ಬಗ್ಗೆ, ಡಿವಿಜನಲ್ ಕಮೀಷನರ್ ಎನ್‌ಕ್ವೈರಿ ಮಾಡಿ ರಿಪೋರ್ಟ್ ಕೊಟ್ಟಿದ್ದನ್ನು ಮಾನ್ಯ ಬೊಮ್ಮಾಯಿಯವರು ಹೇಳಿದರು. ಈ ಒಂದು ಪ್ರಕರಣದಲ್ಲಿ ಯಾವ ರೀತಿಯ ಕ್ರಮ ತೆಗೆದುಕೊಂಡಿಲ್ಲ. ಮಾನ್ಯ ಗುಂಡೂರಾಯರ ಸರ್ಕಾರ ಇದಕ್ಕೆ ಮಣಿಯುತ್ತದೆ ಎಂದು ನಾನು ಅಂದುಕೊಂಡಿಲ್ಲ. ಇವತ್ತು ಮಧ್ಯಾಹ್ನ ಒಂದು ಗಂಟೆಯೊಳಗೆ ಸಭೆ ಏಳುವುದಕ್ಕೆ ಮೊದಲು ಅಂತಿಮ ನಿರ್ಣಯ ಮಾಡಬೇಕು. ನಿನ್ನೆ ೧೦-೩೦ ಗಂಟೆಗೆ ಬೇತಮಾರನಹಳ್ಳಿಯಿಂದ ಬಂದು ತಾಲ್ಲೂಕು ಬೋರ್ಡ್ ಆಫೀಸಿನೊಳಗೆ ಹೋಗತಕ್ಕ ಕಾಲದಲ್ಲಿ ಉಪಾಧ್ಯಕ್ಷರನ್ನು ಹೊಡಸುತ್ತಾರೆ ಅಂದರೆ, ವಿಧಾನಸೌಧದ ಮೂರನೆ ಮಹಡಿಗೆ ಹೋಗುವಾಗ ಮ್ಯಾನ್ ಹ್ಯಾಂಡಲ್ ಮಾಡುವುದಾದರೆ, ನಾವೇಕೆ ಇಲ್ಲಿ ಕುಳಿತುಕೊಳ್ಳಬೇಕು. ತಾಲ್ಲೂಕು ಬೋರ್ಡ್ ಆಫೀಸಿಗೆ ಎಂಟ್ರಿ ಆಗತಕ್ಕ ಕಾಲದಲ್ಲಿ ಹೊಡೆಯುತ್ತಾರೆ ಅಂದರೆ, I want to know whether the Government is alive or dead ? What action the concerned police officers have taken in that particular area and whether they were there to discharge their legitimate duties ? ೯-೩೦ ಗಂಟೆಯಲ್ಲಿ ಹೊಡೆದಿದ್ದಾರೆ, ೧೦-೩೦ ಗಂಟೆಯಲ್ಲಿ ಪೋಲೀಸರಿಗೆ ಅರ್ಜಿ ಕೊಟ್ಟಿದ್ದಾರೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆ ಎಂದು ಕೇಳುತ್ತೇನೆ. ನಾನು ನಿಮ್ಮ ಮೇಲೆ ಆಪಾದನೆ ಮಾಡುತ್ತಾ ಇಲ್ಲ. ಆಫೀಸರ್ಸನ್ನು ಪುಲ್‌ಅಪ್ ಮಾಡಿ ದಯಮಾಡಿ ಒಂದು ಗಂಟೆಯೊಳಗೆ ಅಂತಿಮ ನಿರ್ಧಾರ ಏನು ಎನ್ನುವುದನ್ನು ಹೇಳಬೇಕು. ೧೦-೩೦ ಗಂಟೆಗೆ ಅರ್ಜಿ ಕೊಟ್ಟಮೇಲೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆ ? ತಾಲ್ಲೂಕು ಬೋರ್ಡ್ ಉಪಾಧ್ಯಕ್ಷರು ಸರಾಗವಾಗಿ ಕೆಲಸ ಮಾಡುವುದಕ್ಕೆ ಯಾವುದೇ ರೀತಿಯಾದಂಥ ಹಕ್ಕಿಗೆ ಚ್ಯುತಿ ಬರುವುದಾದರೆ, we are not going to allow all these things. We are going to fight out till the end.

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ, ಇವರು ಹರಿಜನ ಉಪಾಧ್ಯಕ್ಷರು, ನಿಜ. ಇವರನ್ನು ಹೊಡೆಯುವುದಕ್ಕೆ ಹರಿಜನರನ್ನೇ ಬಿಟ್ಟಿದ್ದಾರೆ. ಅವರ ಹೆಸರು ವೆಂಕಟೇಶ್ ಎಂದು. ಅವರು ಚಿತಾವಣೆ ಮಾಡಿ ಹೊಡೆಸಿದ್ದಾರೆ. ಇದನ್ನು ಏನಾದರೂ ಬೇರೆ ಸವರ್ಣೀಯರೂ ಮಾಡಿದ್ದರೆ ಸರಿಯಾದ ಶಾಸ್ತಿಯಾಗುತ್ತಿತ್ತು. ಆ ಅಧಿಕಾರಿ ಗೊತ್ತಿರುವಂಥ ವ್ಯಕ್ತಿ. ಬಿ.ಡಿ.ಓ ಅಧಿಕಾರಿ ಹರಿಜನರನ್ನು ಚಿತಾವಣೆ ಮಾಡಿ ಹರಿಜನ ಉಪಾಧ್ಯಕ್ಷರನ್ನೇ ಹೊಡೆಸಿದ್ದಾರೆ. ಇದರ ಹಿನ್ನೆಲೆ ಬಹಳ ಗಂಭೀರವಾಗಿದೆ. ಇದನ್ನು ಸರ್ಕಾರ ಅರ್ಥ ಮಾಡಿಕೊಳ್ಳಬೇಕು ನಾನು ಈ ಕಂಪ್ಲೈಂಟನ್ನು ಚೀಫ್ ಮಿನಿಸ್ಟರಿಗೆ ಕಳಿಸುತ್ತಿದ್ದೇನೆ. ಸರ್ಕಾರ ಕೂಡಲೇ ಕ್ರಮ ತೆಗೆದುಕೊಳ್ಳಬೇಕು. ತಾಲ್ಲೂಕು ಬೋರ್ಡ್ ಉಪಾಧ್ಯಕ್ಷರಿಗೆ ಕೂಡಲೇ ರಕ್ಷಣೆ ಕೊಡಬೇಕು. ವೆಂಕಟೇಶ್ ಎನ್ನುವವರು ಏನು ಚಿತಾವಣೆ ಮಾಡಿದ್ದಾರೆ, ಇದರ ಹಿಂದೆ ಯಾರ್ಯಾರು ಇದ್ದಾರೆ ಅವರ ಮೇಲೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು ಎಂದು ಕೇಳಿಕೊಳ್ಳುತ್ತೇನೆ.

† SRI C. M. ARUMUGHAM.—Sir, any enquiry by the police should be fair and free and due protection must be given to those who appear before this enquiry, or C.O.D., or any other officer. Otherwise you

† Indicates that remarks or Speeches have not been revised by the member concerned.

cannot expect the truth to come to light. It is not as if in Anekal only there is some mis-appropriation of food for work programme. All over state and in all the constituencies such a thing has happened. We cannot pin up the responsiblity on the Minister because he hails from Anekal, but he must be responsible for the affairs all over the state of Karnataka. As has been said by Sri S. R. Bommai, this B.D.O., is known for his nefarious and goonda activities. He is a man who is wholly and solely responsible for this mis-appropriation of food for work programme. They must take action against him even as enquiry is going on. This is not the case of any politician but this is a case of assault on a Scheduled Caste man. I regret to say that is a very pathetic scene. If a Scheduled Caste man goes as a witness in any civil right case or any other case, he prevented by politicians, by rich people or by the land-lords, but here he is prevented by the Block Development Officer. Preventing a Scheduled Caste man in giving witness or any other witness is a grave offence and it needs a thorough enquiry. You have taken some action by suspending the B. D. O. But this is a case of assault against a Scheduled Caste man which must be probed into, immediately. Whether the enquiry is against the B. D. O., or the department, it should be fair and free. I appeal to the Hon. Minister to announce here only and suspend him.

ಶ್ರೀ ಕೆ. ನಾರಾಯಣಪ್ಪ.—ಮಾನ್ಯ ಅಧ್ಯಕ್ಷರೇ, ದೇವನಹಳ್ಳಿ ತಾಲ್ಲೂಕಿನಲ್ಲಿ ಸಹ ಹರಿಜನ ಸದಸ್ಯರಿದ್ದಾರೆ. ಅಲ್ಲಿ ೩೦ ಸಾವಿರ ರೂಪಾಯಿಗಳ ದುರ್ವ್ಯವಹಾರವಾಗಿದೆಂದು ತಿಳಿದು ಬಂದಿರುವುದರಿಂದ ಆಡಿಟ್ ಆಗುತ್ತಿದೆ. ಆದಕ್ಕೆ ನಮ್ಮ ಕಡೆಯ ಹುಡುಗರನ್ನು ನಾವು ಅಲ್ಲಿ ವಾಚ್ ಮಾಡಲು ಹಂಕಿದ್ದರೆ, ಅವರು ಅಲ್ಲಿರುವ ಸೊಸೈಟಿಯ ಕಡೆ ಓಡಾಡಿದರೆ ಅಲ್ಲಿರುವ ಬಿ. ಡಿ. ಒ. ರವರು ಅವರಿಗೆ ಹೆದರಿಸುತ್ತಿದ್ದಾರೆ. ಆದುದರಿಂದ ಅಲ್ಲಿ ಸಹ ಪ್ರೊಟೆಕ್ಷನ್ ಕೊಡಬೇಕೆಂದು ಹೇಳುತ್ತೇನೆ. ಹೀಗಾದರೆ ಅಲ್ಲಿ ಸಹ ಕೆಲಸ ಮಾಡುವುದು ಕಷ್ಟವಾಗುತ್ತದೆ.

SRI A. LAKSHMISAGAR,—I have had an occasion in this House to bring to the notice of the Government, the manner in which the lands that were granted to the Harijans were forcibly taken away under the very nose of Government officials. This is another instance which is more glaring. If the Government is really interested in bringing out the truth and punishing the guilty persons in the miss-use of funds in the execution of employment affirmation scheme, their *bona fides* must be shown here and now by suspending the Block Development Officer and placing the report on the Table of the House. If that is not done we have got to suspect the *bona fides* of the Government. The Government have proclaimed that they will deal with the guilty but what they have proclaimed they have not implemented. This is not the first time of this person but he is known for his nefarious activities under the very nose of the Government and he had the protection of the previous Minister also.

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರಾದ ಶ್ರೀ ಬೊಮ್ಮಾಯಿ ರವರು ಮತ್ತು ಶ್ರೀ ದೇವೇಗೌಡರು ಮತ್ತು ಶ್ರೀ ಚಂದ್ರಶೇಖರ್‌ರವರು ಮತ್ತು, ಶ್ರೀ ಲಕ್ಷ್ಮೀಸಾಗರ್ ರವರು ಆನೇಕಲ್ ತಾಲ್ಲೂಕಿನಲ್ಲಿ ನಿನ್ನೆ ನಡೆದಂಥ ಒಂದು ಘಟನೆಯ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಈ ಘಟನೆಗೆ ಹಿಂದೆ ಈ ಸದನದಲ್ಲಿ ಬಂದಂಥ, ಆನೇಕಲ್‌ನಲ್ಲಿ ಈ ಎಂಪ್ಲಾಯ್‌ಮೆಂಟ್ ಆಫರ್‌ಮೇಷನ್ ಸ್ಕೀಂನಲ್ಲಿ ದುರ್ವ್ಯವಹಾರವಾಗಿದೆಂದು ಹೇಳಿ ಪ್ರಸ್ತಾಪವಾದ ಹಿನ್ನೆಲೆಯಲ್ಲಿ ಈ ಘಟನೆ ಕೂಡ ಆಗಿದೆಂದು ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ನಾನು ಹೇಳುವುದಿಷ್ಟೇ, ಅಧ್ಯಕ್ಷರೇ, ಈ ದುರ್ವ್ಯವಹಾರದ ಬಗ್ಗೆ ತನಿಖೆ ನಡೆಸಿ ವರದಿಯನ್ನು ಈ ಸದನದ ಮುಂದೆ ಕೂಡ ಇಡುತ್ತೇವೆಂದು ಹೇಳಿದ್ದೇನೆ ಆದರೆ ಇಷ್ಟೇ ದಿವಸದಲ್ಲಿ ಇಡುತ್ತೇನೆಂದು ಹೇಳಿದ ನೆನಪಿಲ್ಲ. ಇದನ್ನು ತನಿಖೆ ಮಾಡುತ್ತಿರುವಾಗ ಇದರ ಬಗ್ಗೆ ಸಾಕ್ಷಿ ಕೊಟ್ಟ ಕಾರಣಕ್ಕಾಗಿ ಅಲ್ಲಿಯ ತಾಲ್ಲೂಕ್ ಬೋರ್ಡ್ ಉಪಾಧ್ಯಕ್ಷರೊಬ್ಬರ ಮೇಲೆ ಹಲ್ಲೆ ನಡೆಸಿದಂಥ ಒಂದು ಕ್ರಮವನ್ನು ಬಿ ಡಿ ಒ. ರವರು ಕೈಗೊಂಡಿದ್ದಾರೆಂದು ಕೂಡ ಆಪಾದನೆಯನ್ನು ಮಾನ್ಯ ಸದಸ್ಯರು ಮಾಡಿದ್ದಾರೆ. ಮತ್ತೆ ಲಿಖಿತವಾಗಿ ಬರೆದು ಕೂಡ ಕೊಟ್ಟಿದ್ದಾರೆಂದು ಹೇಳಿದ್ದಾರೆ. ಆ ರೀತಿ ಬರೆದು ಕೊಟ್ಟಿರತಕ್ಕ ಲಿಖಿತ ಕಂಪ್ಲೆಂಟ್‌ನ್ನು ಇನ್ನು ಓದಿಲ್ಲ, ತಾವು ಕಳುಹಿಸಿ ಕೊಡಿ ಓದಿ ನೋಡುತ್ತೇನೆ.

ಅಧ್ಯಕ್ಷರು.—ನಾನು ತಮಗೆ ಈ ಲಿಖಿತ ಕಂಪ್ಲೆಂಟ್ ಕಳುಹಿಸಿ ಕೊಡುತ್ತಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಅಧ್ಯಕ್ಷರೇ, ಇಂದು ವಿರೋಧ ಪಕ್ಷದವರ ಮೇಲೆ ಆಗಿರಲಿ ಇಲ್ಲವೆ ಆಳುವ ಪಕ್ಷದವರ ಕಡೆಯವರಿಗೇ ಆಗಿರಲಿ, ಅವರಿಗೆ ರಕ್ಷಣೆ ಕೊಡಲೇ ಬೇಕಾಗಿರುತ್ತದೆ. ಏತಕ್ಕೆಂದರೆ ಒಂದು ತನಿಖೆ ಮಾಡುವಂಥಾ ಸಂದರ್ಭದಲ್ಲಿ ಯಾರು ಸಾಕ್ಷಿ ಹೇಳುವುದಕ್ಕೆ ಹೋಗುವಂಥಾ ಸಂದರ್ಭದಲ್ಲಿ ನಿರ್ಭೀತರಾಗಿ ಸಾಕ್ಷಿ ಹೇಳುವಂಥಾ ಒಂದು ಸನ್ನಿವೇಶವನ್ನು ನಾವು ನಿರ್ಮಾಣ ಮಾಡಲೇ ಬೇಕಾಗಿರುತ್ತದೆ. ಇವತ್ತು ಸರ್ಕಾರ ಇದರ ಬಗ್ಗೆ ಕಟ್ಟುನಿಟ್ಟಾದ ಕ್ರಮವನ್ನು ಕೈಗೊಳ್ಳಲಾಗುತ್ತದೆ ಮತ್ತು ಅವರಿಗೆ ಏನು ರಕ್ಷಣೆ ಕೊಡಬೇಕೋ ಅದನ್ನು ಸರ್ಕಾರದ ವತಿಯಿಂದ ಖಂಡಿತವಾಗಿಯೂ ಕೊಡಲಾಗುತ್ತದೆ. ಇದರ ಬಗ್ಗೆ ಯಾವುದೇ ರೀತಿಯಾದ ಶಂಖೆ ಅಥವಾ ಭಯವನ್ನು ಮಾನ್ಯ ಸದಸ್ಯರು ಇಟ್ಟುಕೊಳ್ಳುವ ಅವಶ್ಯಕತೆ ಇಲ್ಲ. ಬಿ ಡಿ. ಒ. ರವರೇ ಇದಕ್ಕೆ ಕಾರಣಕರ್ತರಾಗಿದ್ದಾರೆಂದು ಮಾನ್ಯ ಶ್ರೀ ಲಕ್ಷ್ಮೀಸಾಗರ್‌ರವರು ಹೇಳಿದ್ದಾರೆ. ಆ ರೀತಿ ಕಂಪ್ಲೆಂಟ್‌ನಲ್ಲೂ ಸಹ ಕೊಟ್ಟಿರುವುದಾಗಿ ತಿಳಿಸಿದ್ದಾರೆ. ಅದನ್ನು ನಾನು ನೋಡುತ್ತೇನೆ. ಬಿ. ಡಿ. ಒ. ಅವರೇ ಇದಕ್ಕೆ ಕಾರಣಭೂತರಾಗಿದ್ದರೆ we will not hesitate either to suspend him, or make an enquiry. We will not spare him. ಈ ಬಗ್ಗೆ ನಾವು ಕೂಲಂಕುಷವಾಗಿ ತನಿಖೆ ಮಾಡುತ್ತೇವೆ. ದುರ್ವ್ಯವಹಾರದ ಬಗ್ಗೆ ಕೂಡ ತನಿಖೆ ಮಾಡಿ ವರದಿ ಮಾಡುತ್ತೇವೆ. ಅದೇ ಪ್ರಕಾರ ಬಿ. ಡಿ. ಒ. ರವರ ಮೇಲೆ ಏನು ಆಪಾದನೆ ಮಾಡಲಾಗಿದೆ. We will not hesitate either to suspend him or to make an enquiry. We will not spare him. Prima facie if it is proved, we will take action against him. ಇದರ ಬಗ್ಗೆ ಕೂಡ ಸದನದ ಸದಸ್ಯರು ಯಾವ ರೀತಿಯಾದ ಶಂಖೆಯನ್ನೂ ಕೂಡ ಇಟ್ಟುಕೊಳ್ಳುವುದಕ್ಕೆ ಅವಶ್ಯಕತೆ ಇಲ್ಲ. ಮತ್ತೆ ಒಂದು ಗಂಟೆಯೊಳಗೇ ಇದರ ಬಗ್ಗೆ ವರದಿ ಕೊಡಬೇಕೆಂದು ಹೇಳಿದ್ದಾರೆ. ಇದರಲ್ಲಿ ಎರಡು ವಿಚಾರವಿದೆ ಒಂದು ಎಂಪ್ಲಾಯ್‌ಮೆಂಟ್ ಆಫೀರೇಷನ್ ಸ್ಕೀಂನಲ್ಲಿ ದುರ್ವ್ಯವಹಾರದ ಬಗ್ಗೆ ವರದಿಯನ್ನು ಇಡುವುದು ಎರಡನೆಯದಾಗಿ ನಿನ್ನೆ ನಡೆದಂಥ ಹರಿಜನ ಉಪಾಧ್ಯಕ್ಷರ ಮೇಲೆ ನಡೆದಂಥ ಹಲ್ಲೆಯ ವರದಿ ಎರಡನ್ನೂ ಒಂದು ಗಂಟೆಯೊಳಗಾಗಿ ಇಡಲು ಕೇಳುತ್ತಿದ್ದಾರೆ. ಬಹುಶಃ ನಿನ್ನೆ ನಡೆದಂಥ ವರದಿಯನ್ನು ನಾನು ಒಂದು ಗಂಟೆಯೊಳಗಾಗಿ ವರದಿಯನ್ನು ತರಿಸಿ ಇಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಎರಡನೆಯದಾಗಿ ಎಂಪ್ಲಾಯ್‌ಮೆಂಟ್ ಆಫರೇಷನ್ ಸ್ಕೀಂ ವರದಿಯನ್ನು ನಾನು ಸೋಮವಾರ ಅಥವಾ ಮಂಗಳವಾರದ ದಿವಸ ಈ ಸದನದ ಮುಂದಿಡುತ್ತೇನೆ. ನಾನು ಈಗಾಗಲೇ ಈ ವಿಷಯಕ್ಕೆ ಸಂಬಂಧಪಟ್ಟವರಿಗೆ ತಿಳಿಸಿದ್ದೇನೆ. I cannot give you very positive time. We have to get the report. I will try to get the report and submit to the House by 1-00 P. M.

ಇನ್ನು ಶ್ರೀ ನಾರಾಯಣಪ್ಪನವರೇ ದೇವನಹಳ್ಳಿಯಲ್ಲಿ ನಡೆದಂಥ ಘಟನೆಯ ಬಗ್ಗೆ ಕೂಡ ಪ್ರಸ್ತಾಪ ಮಾಡಿ ಅಲ್ಲಿ ಕೂಡ ಬಿ.ಡಿ.ಒ. ರವರು ಬೆದರಿಕೆ ಹಾಕುತ್ತಿದ್ದಾರೆಂದು ಹೇಳಿದ್ದಾರೆ. ಅದಕ್ಕೆ ಇಲ್ಲಿ ಸಂಬಂಧ ಪಟ್ಟ ಮಂತ್ರಿಗಳೂ ಸಹ ಇದ್ದಾರೆ, ಅದನ್ನು ಸಹ ವಿಚಾರಿಸುತ್ತೇನೆ. ಮತ್ತು ಅವರು ಹೇಳಿದ ಹಾಗೆ ಪ್ರೊಟೆಕ್ಷನ್ ಕೂಡ ಕೊಡುತ್ತೇವೆ.

ಶ್ರೀ ಜಿ.ಎಸ್. ಶಿವನಂಜಪ್ಪ —ಪ್ರೊಟೆಕ್ಷನ್ ಕೊಡಬೇಕು ಸ್ವಾಮಿ.

LEGISLATIVE BUSINESS

Karnataka Tax on Entry of Goods into a Local Area for Consumption, use or Sale therein Bill, 1980.

Motion to consider

SRI M. VEERAPPA MOILY.—Sir, I beg to meve

"that the Karnataka Tax on entry of Goods into a Local Area for Consumption, Use or Sale therein Bill 1980, be taken into consideration".

The question was proposed

ಶ್ರೀ ಎಂ. ವೀರಪ್ಪ ಮೊಯ್ಲಿ (ಹಣಕಾಸಿನ ಸಚಿವರು)

ಅಧ್ಯಕ್ಷರೇ, ತಮಗೆ ತಿಳಿದಂತೆ ಆಕ್ಟ್ರಾಯ್ ನಮ್ಮ ರಾಜ್ಯದಲ್ಲಿ ಏನಿತ್ತು, ಇದರಿಂದ ಸಾರಿಗೆಯವರಿಗೆ ಸಾಕಷ್ಟು ನಷ್ಟವಾಗುತ್ತಿತ್ತು, ಮತ್ತು ಫಿಲ್‌ಫಿರೇಜ್ ಕೂಡ ಈ ದಿಸೆಯಲ್ಲಿ ಆಗುತ್ತಿದೆ, ಹಾಗೂ ಇದು ಔಟ್ ಮೋಡೆಡ್ ಟ್ಯಾಕ್ಸ್ ಎಂಬ ವಿಚಾರ ರಾಷ್ಟ್ರೀಯ ಮಟ್ಟದಲ್ಲಿ ಚಿಂತನೆ ಇತ್ತು. ರಾಜ್ಯ ಮಟ್ಟದಲ್ಲಿ ಇದರ ಬಗ್ಗೆ ಸಾಕಷ್ಟು ಚರ್ಚೆಯಾಗಿ ಸರ್ಕಾರ ಇಧನ್ನು ಕೈಬಿಟ್ಟಿತ್ತು. ಇದರಿಂದ ಸುಮಾರು ೨೫ ಕೋಟಿ ರೂಪಾಯಿ ಬೇರೆ ಬೇರೆ ಪುರಸಭೆಗಳಿಗೆ ಮತ್ತು ನಗರಸಭೆಗಳಿಗೆ ಬರಬೇಕಾದುದು ತಪ್ಪಿ ಹೋಯಿತು. ಇದರಿಂದಾಗಿ ನಗರ ಸಭೆಗಳು ಮತ್ತು ಪುರಸಭೆಗಳು ತಮ್ಮ ಅಭಿವೃದ್ಧಿ ಕಾರ್ಯಕ್ರಮಗಳನ್ನು ತೆಗೆದು ಕೊಳ್ಳುವುದಕ್ಕೆ ಆಗಲಿಲ್ಲ. ದುರ್ಬಲ ವರ್ಗದವರಿಗೆ ಯಾವ ಯೋಜನೆಗಳನ್ನು ಹಾಕಬೇಕೆಂದು ನಗರಸಭೆಗಳಿಗೆ ಮತ್ತು ಪುರಸಭೆಗಳಿಗೆ ನಿರ್ದೇಶನ ಕೊಟ್ಟಿದ್ದೇವು ಆ ಕಾರ್ಯ ಕ್ರಮಗಳನ್ನು ಸಹ ಹಾಕಲಿಕ್ಕೆ ಆಗಲಿಲ್ಲ. ಅಷ್ಟೇ ಅಲ್ಲದೆ, ಕೆಲವು ಪುರಸಭೆಗಳಿಗೆ ತನ್ನ ಸಿಬ್ಬಂದಿ ವರ್ಗಕ್ಕೆ ಸಂಬಳ ಕೊಡಲಿಕ್ಕೆ ಕೂಡ ಆಗಲಿಲ್ಲ. ಆದಕ್ಕೋಸ್ಕರವೇ ಒಂದು ಎಂಟ್ರಿ ಟ್ಯಾಕ್ಸ್ ಎಂದು ಮಾಡಬೇಕೆಂದು ಮಾಡಿ ಆದರಿಂದ ೯ ಕೋಟಿ ರೂಪಾಯಿಗಳನ್ನು ನಿರೀಕ್ಷೆ ಮಾಡಿ ಈ ತೆರಿಗೆಯನ್ನು ವಿಧಿಸಿದ್ದೆವು. ಅದನ್ನು ಸದನ ಕೂಡ ಸಾಕಷ್ಟು ಚರ್ಚೆ ಮಾಡಿ ಮಸೂದೆಯನ್ನು ಅಂಗೀಕಾರ ಮಾಡಿತ್ತು. ಆದರೆ ಅದು ಜಾರಿಗೆ ಬರುವ ಸಂದರ್ಭದಲ್ಲಿ ಹೈ ಕೋರ್ಟಿಗೆ ರಿಟ್ ಪೆಟಿಷನ್ ಹೋಯಿತು. ನಂತರ ಅದು ಅಲ್ಲಿ ಸ್ಟಕ್ ಡೌನ್ ಆಯಿತು, ತದನಂತರ, ಸುಪ್ರೀಂ ಕೋರ್ಟಿಗೆ ಹೋಗಿ ಈಗ ಅಲ್ಲಿ ಬಾಕಿ ಇದೆ (ಜಡ್ಜ್‌ಮೆಂಟಿಗೋಸ್ಕರ ಕಾಯುತ್ತಿದೆ). ಇಲ್ಲಿರತಕ್ಕದ್ದು ದಿನನಿತ್ಯದ ಪ್ರಶ್ನೆ. ಇವತ್ತಿನ ದಿವಸ ಪುರಸಭೆಗಳು ಮತ್ತು ನಗರ ಸಭೆಗಳು ಬದುಕ ಬೇಕಾಗಿದೆ. ಇನ್ನೂ ಕೆಲವು ಸಮಯ ಹೋದರೂ ಪರವಾಗಿಲ್ಲವೆಂದು ಕಾಯುವಷ್ಟು ಸಾಮರ್ಥ್ಯ ಅವುಗಳಲ್ಲಿ ಇಲ್ಲ. ಆದುದರಿಂದ ಆರ್ಡಿನೆನ್ಸ್ ತರಬೇಕಾಯಿತು. ಇದರಲ್ಲಿ ಮೂಲಭೂತ ವಾಗಿರುವುದು ಇಷ್ಟೆ. ಮೊದಲನೆಯನಾಗಿ, ಪೆಟಿ ಡೀಲರ್ಸ್‌ಗೆ ಎಕ್ಸ್‌ಮ್ಪ್ಷನ್ ಕೊಟ್ಟಿಲ್ಲವೆಂಬ ಪ್ರಶ್ನೆ ಇದರಲ್ಲಿದೆ. ಇವತ್ತು ನಾವು ಹಾಕಿದಂತಹ ತೆರಿಗೆಯನ್ನು ಈ ಮಸೂದೆಯಲ್ಲಿ ಸ್ವಚ್ಛವಾಗಿ ಕಾಣಿಸಿದ್ದೇವೆ. A dealer who is liable to get registered himself under the Sales Tax Act that means. ೧೦ ಸಾವಿರ ರೂಪಾಯಿಗಳಿಗಿಂತ ಹೆಚ್ಚು ಟರ್ನ್ ಓವರ್ ಇದ್ದವರಿಗೆ ಮಾತ್ರ ಈ ಎಂಟ್ರಿ ಟ್ಯಾಕ್ಸ್ ಕೊಡುವ ಪ್ರಸಂಗ ಬರುತ್ತದೆ. All those dealers, who have not registered themselves under the Sales Tax Act have been exemp-